ಹರಪನಹಳ್ಳಿಯಲ್ಲಿ ಸರ್ಕಾರಿ ಆಸ್ಪತ್ರೆಯನ್ನು ತೆರೆಯುವುದು.

೭೩೮. ಶ್ರೀ ಬಿ. ಹೆಚ್ ಯಂಕಾನಾಯ್ಕ (ಹರಪನಹಳ್ಳಿ).— ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಳ್ಳಾರಿ ಜಿಲ್ಲೆಯ ಹರಪನಹಳ್ಳಿತಾಲ್ಲೂಕಿನಲ್ಲಿ ಒಂದು ಸುಸಜ್ಜಿತವಾದ ಸರ್ಕಾರಿ ಆಸ್ಪತ್ರೆ ಇಲ್ಲದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಸದರಿ ತಾಲ್ಲೂಕಿಗೆ ೫೦ ಹಾಸಿಗೆಯುಳ್ಳ ಆಸ್ಪತ್ರೆಯನ್ನು ಪ್ರಾರಂಭಿಸಲು ಕಳೆದ ಅಧಿವೇಶನದಲ್ಲಿ ಕೋರಿದ್ದಾಗ ಮಂಜೂರಿನ ಸಾಲಿನಲ್ಲಿ ಪ್ರಾರಂಭಿಸಲಾಗುವುದೆಂದು ಆಶ್ವಾಸನೆ ನೀಡಿರುವುದು ನಿಜವಲ್ಲವೇ ?

ಇ) ಹಾಗಿದ್ದಲ್ಲಿ ಸದರಿ ಆಸ್ಪತ್ರೆಯನ್ನು ಪ್ರಾರಂಭಿಸಲು ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವರೇ ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿಗಳು).—

ಅ) ಬಂದಿದೆ.

ಆ) ಮುಂಬರುವ ವರ್ಷಗಳಲ್ಲಿ ಸಾಕಷ್ಟು ಹಣ ದೊರೆತ ಮೇಲೆ ಈ ಆಸ್ಪತ್ರೆಯನ್ನು ೩೦ ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗುವುದಾಗಿ ತಿಳಿಸಲಾಗಿತ್ತು.

ಇ) ಜಿಲ್ಲಾ ಪರಿಷತ್ತು ಅಗತ್ಯ ಹಣ ಒದಗಿಸಿ ಶಿಫಾರಸ್ಸು ಮಾಡಿದಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಬಿ.ಎಚ್.ಯಂಕಾನಾಯಕ್.—ಅಧ್ಯಕ್ಷರೇ,ಹಿಂದಿನ ಸಲ ಇದೇ ಮನೆಯಲ್ಲಿ ಸನ್ಮಾನ್ಯ ಹಿಂದಿನ ಆರೋಗ್ಯ ಮಂತ್ರಿಗಳು ಈ ವರ್ಷವೇ ಇದನ್ನು ಬಜೆಟ್‌ನಲ್ಲಿ ಸೇರಿಸುತ್ತೇವೆ ಎಂದು ಹೇಳಿದ್ದರು ಸಾಕಷ್ಟು ಹಣ ದೊರೆಯಲಿಲ್ಲ, ಆದ್ದರಿಂದ ಆಸ್ಪತ್ರೆ ಆಗಲಿಲ್ಲ ಎಂಬುದು ತಮ್ಮ ಭಾವನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ೨೪ನೇ ತಾರೀಖು ನಮ್ಮ ಹರಪ್ಪನಹಳ್ಳಿಗೆ ಬಂದು ಪಬ್ಲಿಕ್ ಮೀಟಿಂಗ್‌ನಲ್ಲಿ ಸಾರ್ವಜನಿಕ ಆಸ್ಪತ್ರೆ ಮಾಡಿಕೊಡುತ್ತೇವೆ ಎಂದು ಹೇಳಿದ್ದಾರೆ. ಪ್ರೆಸ್‌ನವರ ಎದುರು ಮತ್ತು ನಮ್ಮೆದುರು ಈ ಮಾತನ್ನು ಹೇಳಿದ್ದಾರೆ. ಆದ್ದರಿಂದ ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೇ ಉತ್ತರಿಸ ಬೇಕು ಎಂದು ಕೇಳಿಕೊಳ್ಳುತ್ತೇನೆ. ಹಿಂದಿನ ಸಲ ಮಾನ್ಯ ಎಚ್. ಟಿ. ಕೃಷ್ಣಪ್ಪನವರು ಆರೋಗ್ಯ ಮಂತ್ರಿಗಳಾಗಿದ್ದಾಗ ಆಸ್ಪತ್ರೆ ಮಾಡಿಸಿಕೊಡುವುದಾಗಿ ಪ್ರಾಮಿಸ್ ಮಾಡಿದ್ದರು. ಮೊನ್ನೆ ೨೪ನೇ ತಾರೀಖು ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಜಿಲ್ಲಾ ಮಂತ್ರಿಗಳಾದ ಬೊಮ್ಮಾಯಿಯವರ ಜೊತೆ ಬಂದಿದ್ದಾಗ ೧೦-೧೫ ಸಾವಿರ ಜನರ ಎದುರು ಮಾಡಿಸಿಕೊಡುತ್ತೇವೆ ಎಂದು ಪ್ರಾಮಿಸ್ ಮಾಡಿದಾರೆ. ಆದ್ದರಿಂದದಯಮಾಡಿ ಈ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಗಳೇ ರಿಪ್ಲೈ ಕೊಡಬೇಕು. ನಿಮಗೆ ಬೇಡ ಎಂದರೆ ಕ್ಯಾನ್ಸಲ್ ಮಾಡಿ. ಸುಮ್ಮನೆ ಪೆಕ್ಕಕ್ಕೆ ಬೋಗಸ್ ಮಾತು ಹೇಳಂತ್ತೀರಿ ? ಕೊಡದೇ ಇದ್ದರೆ ಕೊಡುವುದಿಲ್ಲ ಎಂದು ದಯಮಾಡಿ ಹೇಳಿಬಿಡಿ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಕೊಡುತ್ತೇನೆ ಎಂದು ಹೇಳಿದ್ದಾರೆಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿಗೇ ಇದನ್ನು ಕಳಿಸಿಕೊಡುತ್ತೇನೆ. ಅವರು ಅಪ್ಪಣೆ ಕೊಟ್ಟರೆ ಮಾಡಿಸಿಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಂದರೆ ಇವರು ಮಾಡಿಕೊಡುವುದಿಲ್ಲ ಎಂದು ಹೇಳಿದ ಹಾಗಾಯಿತು.

ಶ್ರೀ ಎಂ. ಎಸ್. ಪಾಟೀಲ್.—ಅಧ್ಯಕ್ಷರೇ, ಇದು ಬಹಳ ಮುಖ್ಯವಾದ ವಿಷಯ.

ಅಧ್ಯಕ್ಷರು.—ನಿಮಗೆ ಆಮೇಲೆ ಉತ್ತರ ಕೊಡಿಸುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೂ ಮಂತ್ರಿಗಳಾಗಿದ್ದವರು. ಅವರಿಗೆ ಗೊತ್ತಿದೆ.

ಶ್ರೀ ಬಿ. ಎಚ್. ಯಂಕಾನಾಯಕ್ —ಮುಖ್ಯಮಂತ್ರಿಗಳು ಉತ್ತರ ಹೇಳಬೇಕು. ಆಗದೇ ಇದ್ದರೆ ಆಗುವುದಿಲ್ಲ ಎಂದು ಹೇಳಿ.

ಅಧ್ಯಕ್ಷರು.—ಅವರು ಉತ್ತರ ಹೇಳಿದ್ದಾರೆ.

ಶ್ರೀ ಬಿ. ಎಚ್. ಯಂಕಾನಾಯಕ್,—ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಲಿ. ಇಲ್ಲ ಎಂದರೆ ಆಗುವುದಿಲ್ಲ ಎಂದು ಹೇಳಲಿ. ಪ್ರೆಸ್‌ನವರು ಮಂತ್ರಿ ಸಾರ್ವಜನಿಕರ ಎದುರಿಗಡೆ ಮಾಡಿಸಿಕೊಡುತ್ತೇನೆಂದು ಹೇಳಿದ್ದಾರೆ.

ಅಧ್ಯಕ್ಷರು.—ಇನ್ನೊಂದು ಸಾರಿ ಅವರಿಗೆ ಉತ್ತರ ಹೇಳಿ.

ಶ್ರೀ ಬಿ. ಹೆಚ್. ಯಂಕಾನಾಯಕ್.—ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ಇಲ್ಲದಿದ್ದರೆ ನಾನು ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ಯಂಕಾನಾಯಂಕ್ ಅವರು ತಮ್ಮ ಸ್ಥಳದಿಂದ ಪಕ್ಕಕ್ಕೆ ಬಂದರು)

ಶ್ರೀ ಬಿ. ರಾಚಯ್ಯ.—ಅವರು ಸೀಟು ಬಿಟ್ಟು ಈಚೆ ಬಂದರೆ ಉತ್ತರ ಕೊಡುವುದಿಲ್ಲ. ಅಲ್ಲೇ ನಿಂತು ಕೇಳಿದರೆ ಹೇಳುತ್ತೇನೆ

ಶ್ರೀ ಬಿ. ಹೆಚ್. ಯಂಕಾನಾಯಕ್.—ಆಗದಿದ್ದರೆ ಆಗುವುದಿಲ್ಲ ಎಂದು ಹೇಳಿ.

ಶ್ರೀ ಬಿ. ರಾಚಯ್ಯ.—ಕೂತ್ಕೊಳ್ಳಿ ಅಧ್ಯಕ್ಷರೇ ಅವರಿಗೆ ಕೂರುವುದಕ್ಕೆ ಹೇಳಿ.

ಶ್ರೀ ಬಿ. ಹೆಚ್. ಯಂಕಾನಾಯಕ್.—ಮುಖ್ಯಮಂತ್ರಿಗಳು ಹೇಳಬೇಕು. ಇಲ್ಲದಿದ್ದರೆ ನಾನು ಸಭಾತ್ಯಾಗ ಮಾಡುತ್ತೇನೆ.

ಅಧ್ಯಕ್ಷರು.—ಆಸ್ಪತ್ರೆ ಆದಷ್ಟು ಬೇಗನೆ ಮಾಡಿಸಂತ್ತಾರೆ ಕೂತ್ಕೊಳ್ಳಿ.

ಶ್ರೀ ರಾಮಕೃಷ್ಣಹೆಗಡೆ (ಮುಖ್ಯಮಂತ್ರಿಗಳು).—ಅಧಕ್ಷರೇ, ಅವರ ಊರಿನಲ್ಲೇ ಹೇಳಿ ಬಂದಿದ್ದೇನೆ. ಇನ್ನು ಇಲ್ಲಿ ಹೇಳುವುದು ಏನು ದೊಡ್ಡದು ? ಅವರ ಮತದಾರರ ಎದುರುಗಡೆಯೇ ಹೇಳಿದ್ದೇನೆ. ಆಲ್ಲಿ ಏನು ಹೇಳಿದ್ದೇನೋ ಅದನ್ನು ಮಾಡಿಸಿಕೊಡುತ್ತೇನೆ.

ಶ್ರೀ ಬಿ. ಹೆಚ್. ಯಂಕಾನಾಯಕ್.—ಆಗದಿದ್ದರೆ ಇಲ್ಲ ಎಂದು ಹೇಳಿ.

ಅಧ್ಯಕ್ಷರು.—ಮಾಡಿಸಿಕೊಡುತ್ತೇನೆ ಎಂದು ಹೇಳುತ್ತಿದ್ದಾರೆ. ಅಷ್ಟು ಭರವಸೆ ಇಲ್ಲವೇ ನಿಮಗೆ? ನೀಲಕಂಠಪ್ಪನವರೆ, ತಮ್ಮ ಪ್ರಶ್ನೆ ಕೇಳಿ.

ತರೀಕೆರೆ ತಾಲ್ಲೂಕು ಹಂಣಸೆಘಟ್ಟಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ

೯೧೬ ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತರೀಕೆರೆ ತಾಲ್ಲೂಕಿನ ಹುಣಸೇಘಟ್ಟ ಸರ್ಕಾರಿ ಪ್ರಾಥಮಿಕ ಆರೋಗ್ಯ ಘಟಕವನ್ನು ಆರೋಗ್ಯ ಕೇಂದ್ರವನ್ನಾಗಿ ಪರಿವರ್ತಿಸಲು ಸರ್ಕಾರಕ್ಕೆ ಮನವಿ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಯಾವಾಗ ಮಂಜೂರಾತಿ ನೀಡಲಾಗುವುದು ?

ಇ) ಗ್ರಾಮಸ್ಥರು ೧,೨೫,೦೦೦ ರೂ. ಗಳ ವಂತಿಗೆ ಸಂಗ್ರಹಿಸಿ ಆಡಳಿತ ಮಂಜೂರಾತಿಗಾಗಿ ಕಾಯಂತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಇದರ ಬಗ್ಗೆ ಜಿಲ್ಲಾ ಪರಿಷತ್‌ನವರು ಶಿಫಾರಸ್ಸು ಮಾಡಿದ್ದಾರೆಯೇ ಹಾಗಿದ್ದಲ್ಲಿ ಯಾವಾಗ ಕಾರ್ಯಗತ ಮಾಡಲಾಗುವುದು ?